

# ದುಡ್ಡು-, ಕೀರ್ತಿಗಾಗಿ ನಟಿಸುತ್ತಿಲ್ಲ..

ಹೊಸ ತಲೆಮಾರಿನ ಕನ್ನಡ ನಟಿಯರಲ್ಲಿ **ಶ್ರುತಿ ಹರಿಹರನ್** ಅವರದು ಪ್ರಮುಖ ಹೆಸರು. ಭರತನಾಟ್ಯ ಕಲಾವಿದೆಯಾದ ಶ್ರುತಿ 'ಲೂಸಿಯಾ' (2013) ಮೂಲಕ ನಾಯಕನಟಿಯಾಗಿ ಗುರ್ತಿಸಿಕೊಂಡರು. 'ಬ್ಯೂಟಿಫುಲ್ ಮನಸುಗಳು', 'ದ್ಯಾವ್ರೆ', 'ಗೋಧಿ ಬಣ್ಣ ಸಾಧಾರಣ ಮೈಕಟ್ಟು', 'ಮಾದ ಮತ್ತು ಮಾನಸಿ', 'ಉರ್ವಿ', 'ಸಿಪಾಯಿ' ಹಾಗೂ 'ರಾಟೆ' ಅವರ ಅಭಿನಯದ ಕೆಲವು ಚಿತ್ರಗಳು. ನಟನೆಯ ಬಗ್ಗೆ ಗಾಢ ಅನುರಾಗ ಹೊಂದಿರುವ ಅವರು, 'ಬ್ಯೂಟಿಫುಲ್ ಮನಸುಗಳು' ಚಿತ್ರದಲ್ಲಿನ ನಟನೆಗಾಗಿ ಅತ್ಯುತ್ತಮ ನಟಿ ರಾಜ್ಯಪ್ರಶಸ್ತಿ ಪಡೆದಿದ್ದಾರೆ. ಚೊಚ್ಚಲ ರಾಜ್ಯಪ್ರಶಸ್ತಿ ಸಂಭ್ರಮದಲ್ಲಿರುವ ಶ್ರುತಿ ಅವರೊಂದಿಗಿನ ಕಿರು ಸಂದರ್ಶನ ಇಲ್ಲಿದೆ.

## ರಿಂಗ್‌ರೋಡ್‌ನಲ್ಲಿ ಬರೀ ಹೆಣ್ಣುಮಕ್ಕಳು!

ಕನ್ನಡದ 'ರಿಂಗ್ ರೋಡ್ ಶುಭಾ' ಭಾರತೀಯ ಚಿತ್ರರಂಗದ ಒಂದು ವಿಶಿಷ್ಟ ಪ್ರಯೋಗ. ಕಥೆ ಹಾಗೂ ನಿರ್ಮಾಣ ಎರಡಲ್ಲೂ ವಿಶೇಷ ಹೊಂದಿರುವ ಚಿತ್ರವಿದು. ಸಿನಿಮಾದ ಎಲ್ಲ ಹಂತಗಳಲ್ಲೂ ಮಹಿಳಾ ತಂತ್ರಜ್ಞರು ಭಾಗವಹಿಸಿರುವುದು ಚಿತ್ರದ ಮುಖ್ಯ ವಿಶೇಷ. ಪ್ರಿಯಾ ಬೆಳ್ಳಿಯಪ್ಪ ಈ ಚಿತ್ರದ ನಿರ್ದೇಶಕಿ. ರಂಜಿನಿ ರವೀಂದ್ರದಾಸ್ ನಿರ್ಮಾಣ, ರೇಷ್ಮಿ ಸರ್ಕಾರ್ ಛಾಯಾಗ್ರಹಣ, ವಾಣಿ ಹರಿಕೃಷ್ಣ ಸಂಗೀತ, (ಜೀವಿತಾ–ಚಂದ್ರಿಕಾ) ನೃತ್ಯ, ರೇಖಾ ರಾಣಿ ಸಾಹಿತ್ಯ, ಅವಂತಿಕಾ ನಿಂಬಾಳ್ಕರ್ ಧ್ವನಿವಿನ್ಯಾಸ, ಮರಿಯನ್ ಡಿಸೋಜ ಸಂಕಲನ – ಹೀಗೆ, 'ಬರೀ ಹುಡ್ಗೀರು' ರೂಪಿಸಿದ ಕಾರಣದಿಂದಾಗಿ 'ರಿಂಗ್ ರೋಡ್ ಶುಭಾ' ಸುದ್ದಿ ಮಾಡಿತ್ತು.

ನೈಜಕಥೆಯನ್ನು ಬಳಸಿಕೊಂಡ ಕಾರಣದಿಂದಲೂ ಸಿನಿಮಾ ಕುತೂಹಲ ಮೂಡಿಸಿತ್ತು. ತನ್ನ ಭಾವೀ ಪತಿಯನ್ನು ಪ್ರಿಯಕರ ನೆರವಿನಿಂದ ಕೊಲ್ಲಿಸಿದ್ದ ಯುವತಿಯೊಬ್ಬಳ ಪ್ರಕರಣ ಬೆಂಗಳೂರಿನಲ್ಲಿ ನಡೆದಿತ್ತು. ಈ ಕಥೆಯ ಪ್ರೇರಣೆ ಚಿತ್ರದಲ್ಲಿದೆ.

ಹೇಗೆ? ಇದೇನು ಕಾಕತಾಳೀಯವೇ ಅಥವಾ ಪ್ರಜ್ಞಾಪೂರ್ವಕ ಪ್ರಯತ್ನವೇ?

'ಶುದ್ಧಿ', 'ಉರ್ವಿ', 'ಯು ಟರ್ನ್', 'ಬ್ಯೂಟಿಫುಲ್ ಮನಸುಗಳು' ರೀತಿಯ ಚಿತ್ರಗಳನ್ನು ನೋಡುತ್ತಿದ್ದರೆ ಕನ್ನಡ ಚಿತ್ರರಂಗದಲ್ಲಿನ ಸಂವೇದನೆ ಬದಲಾಗುತ್ತಿರುವ ಭಾವನೆ ಉಂಟಾಗುತ್ತದೆ ಎನ್ನುತ್ತಾರೆ ಜಯತೀರ್ಥ. ಹೊಸ ರೀತಿಯ ಸಿನಿಮಾಗಳು ರೂಪುಗೊಳ್ಳುತ್ತಿರುವ ಸಂದರ್ಭದಲ್ಲಿ – 'ನಮ್ಮಲ್ಲೀಗ ಸಂವೇದನಾಶೀಲ ಪ್ರೇಕ್ಷಕರ ಸಮೂಹವೂ ರೂಪುಗೊಂಡಿದೆ' ಎನ್ನುವುದನ್ನು ಅವರು ಗಮನಿಸಿದ್ದಾರೆ. ಸಿನಿಮಾದ ವ್ಯಾಕರಣ ಹಾಗೂ ಪ್ರೇಕ್ಷಕರ ಅಭಿರುಚಿ ಎರಡೂ ಬದಲಾಗಿರುವ ಸಂದರ್ಭದಲ್ಲಿ, 'ಹೊಸ ಪ್ರಯತ್ನಗಳನ್ನು ಬೆಂಬಲಿಸುವ ನಿರ್ಮಾಪಕರು ಹೆಚ್ಚಬೇಕಾಗಿದೆ' ಎನ್ನುವುದನ್ನು ಅವರು ಒತ್ತಿಹೇಳುತ್ತಾರೆ. ಪ್ರೇಕ್ಷಕರ ಕುರಿತ ಮಾತಿನ ಸಂದರ್ಭದಲ್ಲಿ ಕೌಟುಂಬಿಕ ಪ್ರೇಕ್ಷಕರು ಮತ್ತೆ ಚಿತ್ರಮಂದಿರಗಳಿಗೆ ಬರುತ್ತಿರುವುದನ್ನು ನೆನಪಿಸಿಕೊಳ್ಳಬೇಕು. ಇತ್ತೀಚಿನ ವರ್ಷಗಳಲ್ಲಿ ಕಾಲೇಜು ತರುಣ ತರುಣಿಯರನ್ನಷ್ಟೇ ಕನ್ನಡ ಸಿನಿಮಾಗಳು ನೆಚ್ಚಿಕೊಂಡಿದ್ದವು. ಆದರೆ, ಸದಭಿರುಚಿಯ ಸಿನಿಮಾಗಳು ನಿರಂತರವಾಗಿ ರೂಪುಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಕೌಟುಂಬಿಕ ಪ್ರೇಕ್ಷಕರು, ವಿಶೇಷವಾಗಿ ಮಹಿಳೆಯರು ಮತ್ತೆ ಚಿತ್ರಮಂದಿರಗಳಿಗೆ ಬರುತ್ತಿದ್ದಾರೆ.

ಸಿನಿಮಾ ಅಥವಾ ಯಾವುದೇ ಕಲೆ ವರ್ತಮಾನಕ್ಕೆ ವರ್ತಮಾನಕ್ಕೆ ಹಿಡಿದ ಕನ್ನಡಿಯೇ ಆಗಿರುತ್ತದೆ ಎನ್ನುವುದನ್ನು ವಿಶ್ವನಾಥ್ 'ಮಹಿಳಾ ಕಥನ'ಗಳ ಸಿನಿಮಾಗಳ ಹಿನ್ನೆಲೆಯಲ್ಲಿ ನೆನಪಿಸಿಕೊಳ್ಳುತ್ತಾರೆ. 'ಯಾವುದೇ ಪತ್ರಿಕೆಯನ್ನು ಆಮೂಲಾಗ್ರವಾಗಿ ಓದಿದರೆ ಅಲ್ಲಿ ಹೆಣ್ಣಿನ ಸಾಧನೆ–ಶೋಷಣೆಗೆ ಸಂಬಂಧಿಸಿದ ಸುದ್ದಿಗಳು ಹೆಚ್ಚಾಗಿರುತ್ತವೆ. ಹಾಗಾಗಿ, ಹೆಣ್ಣಿನ ತವಕತಲ್ಲಣಗಳ ಕಥೆಗಳು ಹೆಚ್ಚು ಸಮಕಾಲೀನ ಎಂದು ನಮ್ಮ ಯುವ ನಿರ್ದೇಶಕರಿಗೆ ಅನ್ನಿಸಿರಬೇಕು. 'ಶುದ್ಧಿ'ಯಂಥ ಸಿನಿಮಾ ಹೆಚ್ಚು ಸಮಕಾಲೀನ ಆಗಿರುವುದರಲ್ಲದೆ, ತಾಂತ್ರಿಕವಾಗಿಯೂ ಗಟ್ಟಿಯಾಗಿದೆ' ಎನ್ನುತ್ತಾರೆ.

### ನಟಿಯರಿಲ್ಲ ಎನ್ನುವುದು ಸುಳ್ಳು!

ಇತ್ತೀಚೆಗೆ ನಡೆದ ಕಾರ್ಯಕ್ರಮವೊಂದರಲ್ಲಿ ಹಿರಿಯ ನಟ ಅಂಬರೀಷ್, 'ಕನ್ನಡ ಚಿತ್ರರಂಗದಲ್ಲೀಗ ಒಳ್ಳೆಯ ನಟಿಯರಿಲ್ಲ' ಎಂದಿದ್ದರು. ತಮ್ಮ ಕಾಲದ ನಟಿಯರನ್ನು ನೆನಪಿಸಿಕೊಂಡು ಅವರು ಈ ಮಾತು ಹೇಳಿದ್ದರು. 'ಕರ್ನಾಟಕ ಚಲನಚಿತ್ರ ಅಕಾಡೆಮಿ' ಅಧ್ಯಕ್ಷ ಎಸ್.ವಿ. ರಾಜೇಂದ್ರಸಿಂಗ್ ಬಾಬು – 'ಸ್ತ್ರೀಪ್ರಧಾನ ಕಥೆಗಳ ಸಿನಿಮಾಗಳನ್ನು ತೆಗೆಯೋಣವೆಂದರೆ, ಅದಕ್ಕೆ ಹೊಂದುವ